ಇಂದು ದಿನಾಂಕಃ 18-12-2023 ಸಾಕ್ಷಿಗೆ ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು 6 ನೇ ಪ್ರತಿವಾದಿ ಪರವಾಗಿ ಶ್ರೀ ಎಸ್.ಕೆ. ವಕೀಲರಿಂದಃ-**

1 ನೇ ಪ್ರತಿವಾದಿಯ ತಂದೆ ಹೆಸರು ಗೊತ್ತಿಲ್ಲ. 1 ನೇ ಪ್ರತಿವಾದಿ ನನ್ನ ತಂದೆ. 1 ನೇ ಪ್ರತಿವಾದಿಯ ತಂದೆ ಹೆಸರು ಬಸಪ್ಪ ಎಂದರೆ ಇರಬಹುದು. ನನ್ನ ತಂದೆ 3 ಜನ ಅಣ್ಣತಮ್ಮಂದಿರು ಇದ್ದಾರೆ. ಅವರು ಶಾಧಿಪುರ, ಮೀರಿಯಾಣ, ಹೂವಿನ ತೋಟದಲ್ಲಿ ಇದ್ದಾರೆ. ನನ್ನ ಅಜ್ಜ ಐನೋಳ್ಳಿ ಗ್ರಾಮದವರು. ನನ್ನ ಅಜ್ಜನ  ಹೆಸರು ಬಸಪ್ಪ ಎಂದರೆ ಸರಿ. ನನ್ನ ತಂದೆ ಸಹ ಐನೋಳ್ಳಿ ಗ್ರಾಮದವರು ಎಂದರೆ ಸರಿ. 2 ನೇ ಪ್ರತಿವಾದಿ ನನ್ನ ತಾಯಿ. ನನ್ನ ತಾಯಿಯ ತಂದೆ ಹೆಸರು ನಾಗಪ್ಪ ಎಂದರೆ ಸರಿ. ನಾಗಪ್ಪರವರಿಗೆ ಒಬ್ಬಳೆ ಮಗಳು ಇರುತ್ತಾಳೆ. ನಾಗಪ್ಪ ಮತ್ತು ನನ್ನ ತಾಯಿ ಮೀರಿಯಾಣ ಗ್ರಾಮದವರು ಎಂದರೆ ಸರಿ. ದಾವಾ ಜಮೀನು ನನ್ನ ತಾಯಿಗೆ ಅವರ ತಂದೆಯಿಂದ ಬಂದಿದ್ದೇ ಎಂದರೆ ಸಾಕ್ಷಿ ಸದರಿ ಜಮೀನು ನನ್ನ ತಾಯಿಯ ಹಿರಿಯರ ಆಸ್ತಿ ಎಂದು ನುಡಿಯುತ್ತಾರೆ. 1 ರಿಂದ 5 ನೇ ಪ್ರತಿವಾದಿಯರು ಮೀರಿಯಾಣದಲ್ಲಿ ತಮ್ಮ ಹೊಸ ಮನೆಯಲ್ಲಿ ಹೋಟೆಲ ನಿರ್ಮಿಸಿದ್ದಾರೆ ಎಂದರೆ ಸಾಕ್ಷಿ ಹಳೆ ಮನೆಯಲ್ಲಿ ಹೋಟೆಲ್ ನಿರ್ಮಿಸಿದ್ದಾರೆ ಎಂದು ನುಡಿಯುತ್ತಾರೆ. 1 ರಿಂದ 5 ನೇ ಪ್ರತಿವಾದಿಯರು ಒಂದು ವಾಹನ ಇಟ್ಟಿದ್ದಾರೆ ಎಂದರೆ ಸಾಕ್ಷಿ ಅದು ಬೇರೆಯವರದು ಎಂದು ನುಡಿಯುತ್ತಾರೆ.

ನನ್ನ ಗಂಡನ ಹೆಸರು ಚಂದ್ರಶೇಖರ ಎಂದರೆ ಸರಿ. ನನ್ನ ಗಂಡ ಶಾದ್ ನಗರ ಗ್ರಾಮದವರು. ಸದರಿ ಗ್ರಾಮದಲ್ಲಿ ನನ್ನ ಗಂಡ ಎಷ್ಟು ಹಣಕ್ಕೆ ಜಮೀನು ಮಾರಾಟ ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ಸದರಿ ಹಣದಿಂದ 6 ನೇ ಪ್ರತಿವಾದಿಗೆ ನಾವು ದಾವಾ ಜಮೀನನ್ನು ಮಾರಾಟ ಮಾಡಲು ಕೇಳಿರುತ್ತೇವೆ ಎಂದರೆ ಸರಿಯಲ್ಲ. 6 ನೇ ಪ್ರತಿವಾದಿ ಮಾರಾಟ ಮಾಡಲು ತಿರಸ್ಕರಿದ ಕಾರಣ ಈ ಸುಳ್ಳು ದಾವೆಯನ್ನು ಹುಡಿದ್ದೇವೆ ಎಂದರೆ ಸರಿಯಲ್ಲ.

2 ನೇ ಪ್ರತಿವಾದಿ ದಾವಾ ಜಮೀನನ್ನು 6 ನೇ ಪ್ರತಿವಾದಿಗೆ ಮಾರಾಟ ಮಾಡಿ 13-14 ವರ್ಷಗಳು ಆಗಿವೆ ಎಂದರೆ ಸರಿ. ಈ 13-14 ವರ್ಷಗಳಲ್ಲಿ ನಾನು ಯಾವುದೇ ತಕರಾರನ್ನು ಸಲ್ಲಿಸಿಲ್ಲ. ಇದೆ ಮೊದಲನೇ ಬಾರಿಗೆ ದಾವೆ ಹುಡಿದ್ದೇನೆ ಎಂದರೆ ಸಾಕ್ಷಿ ನನಗೆ ಗೊತ್ತಾದ ಮೇಲೆ ದಾವೆ ಹುಡಿದ್ದೇನೆ ಎಂದು ನುಡಿಯುತ್ತಾರೆ. ನನಗೆ ಮಾರಾಟ ಮಾಡಿರುವ ಬಗ್ಗೆ ಗೊತ್ತಿದ್ದರು ಸಹ 6 ನೇ ಪ್ರತಿವಾದಿ ಮಾರಾಟ ಮಾಡಲು ತಿರಸ್ಕರಿಸಿದ ಕಾರಣ ಈ ಸುಳ್ಳು ದಾವೆಯನ್ನು ಹುಡಿದ್ದೇವೆ ಎಂದರೆ ಸರಿಯಲ್ಲ. ಈ 13-14 ವರ್ಷಗಳಿಂದ 6 ನೇ ಪ್ರತಿವಾದಿ ದಾವಾ ಜಮೀನಿನಲ್ಲಿ ಉಳುಮೆ ಮಾಡುತ್ತಿದ್ದಾನೆ ಎಂದರೆ ನನಗೆ ಗೊತ್ತಿಲ್ಲದೆ ಮಾಡುತ್ತಿದ್ದೇನೆ ಎಂದು ನುಡಿಯುತ್ತಾರೆ. ಈಗ 13-14 ವರ್ಷಗಳಿಂದ ನಾನು 6 ನೇ ಪ್ರತಿವಾದಿಗೆ ಕೇಳಿರುವುದಿಲ್ಲ ಎಂದರೆ ಸರಿ.

1 ರಿಂದ 5 ನೇ ಪ್ರತಿವಾದಿಯರ ಮನೆಯ ಮೇಲೆ ಛತ್ತು ಹಾಕಿದ್ದಾರೆ ಎಂದರೆ ಸರಿ. ದಾವಾ ಜಮೀನು ಮಾರಾಟ ಮಾಡಿದ ನಂತರ ಸದರಿ ಹಣದಿಂದ ಛತ್ತು ನಿರ್ಮಾಣ ಮಾಡಿದ್ದಾರೆ ಎಂದರೆ ಸಾಕ್ಷಿ ಅವರ ಹತ್ತಿರ ಹೋಟಿಲ್ ಇದೆ ಅವರ ಸ್ವಂತ ದುಡಿಮೆಯಿಂದ ಛತ್ತು ನಿರ್ಮಾಣ ಮಾಡಿದ್ದಾರೆ ಎಂದು ನುಡಿಯುತ್ತಾರೆ. ಈ ರೀತಿ ಛತ್ತು ನಿರ್ಮಾಣ ಮಾಡಿ 4-5 ವರ್ಷಗಳಾಗಿವೆ. ಈ ರೀತಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಜಮೀನು ಮಾರಾಟ ಮಾಡಿದ 2-3 ವರ್ಷಗಳಲ್ಲಿ ಛತ್ತ್ ನಿರ್ಮಾಣ ಮಾಡಿದ್ದಾರೆ ಎಂದರೆ ಸರಿ.

ಟಾಕ್ಸಿಯನ್ನು 5 ತಿಂಗಳಿಂದ 3 ನೇ ಪ್ರತಿವಾದಿ ಚಲಾಯಿಸುತ್ತಿದ್ದಾರೆ. ಸದರಿ ವಾಹನ ಟವೇರಾ ವಾಹನವಾಗಿದೆ. ದಾವಾ ಜಮೀನನ್ನು ಮಾರಾಟ ಮಾಡಿದ ಹಣದಿಂದ ನನ್ನ ಅಣ್ಣ ವಾಹನವನ್ನು ಖರೀದಿ ಮಾಡಿದ್ದಾರೆ ಎಂದರೆ ಸರಿಯಲ್ಲ. 2013-2014 ರಿಂದ ನನ್ನ ಅಣ್ಣ ಟಾಕ್ಸಿ ಚಲಿಸುತ್ತಿದ್ದಾರೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಬೇರೆಯವರ ಹತ್ತಿರ ಚಲಿಸುತ್ತಾರೆ ಎಂದು ನುಡಿಯುತ್ತಾರೆ. 6 ನೇ ಪ್ರತಿವಾದಿ ದಾವಾ ಜಮೀನನ್ನು ನನಗೆ ಮಾರಾಟ ಮಾಡದೇ ಇರುವ ಕಾರಣ ಸುಳ್ಳು ದಾವೆಯನ್ನು ಸಲ್ಲಿಸಿ ಸುಳ್ಳು ಶಪತ ಪತ್ರವನ್ನು ಸಲ್ಲಿಸಿ ಈ ದಿನ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಈ ದಿನ ನನ್ನ ತಾಯಿ ಮನೆಗೆ ಹೋಗಿ ನಂತರ ನ್ಯಾಯಾಲಯಕ್ಕೆ ಬಂದಿದ್ದೇನೆ ಎಂದರೆ ಸರಿಯಲ್ಲ. ಹಿಂದಿನ ದಿನಾಂಕದಂದು ಸಹ ನನ್ನ ತಾಯಿ ಮನೆಗೆ ಹೋಗಿ ನಂತರ ನ್ಯಾಯಾಲಯಕ್ಕೆ

ಬಂದಿದ್ದೇನೆ ಎಂದರೆ ಸರಿಯಲ್ಲ. ನಾನು ಮತ್ತು 1 ರಿಂದ 5 ನೇ ಪ್ರತಿವಾದಿಯರು ಸೇರಿ ಈ ಸುಳ್ಳು ದಾವೆಯನ್ನು ಹುಡಿದ್ದೇವೆ ಎಂದರೆ ಸರಿಯಲ್ಲ.

**ಪಾಟೀ ಸವಾಲು 1 ರಿಂದ 5 ನೇ ಪ್ರತಿವಾದಿ ಪರವಾಗಿಃ** ಇಲ್ಲ

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು,**
**ಚಿಂಚೋಳಿ**